**ಚಾಸಾ-4 ಪ್ರಾಸಾ-3**

**3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ.**

**ಸಿಸಿ. 13735/2019**

| | |
|---|---|
| **ಸಾಕ್ಷಿದಾರರ ಹೆಸರು** | ಉದಯ್ ಕುಮಾರ್.ವೈ.ಸಿ,, |
| **ತಂದೆಯ ಹೆಸರು** | ಲೇಟ್. ಚಂದ್ರಶೇಖರ್.ವೈ.ಎಲ್ |
| **ವಯಸ್ಸು** | 64 ವರ್ಷ |
| **ಉದ್ಯೋಗ** | ನಿವೃತ್ತ ಖಾಸಗಿ ಕಂಪನಿ ನೌಕರ, |
| **ವಾಸ** | ದೇವರಾಯ ಸಮುದ್ರ, ಕೋಲಾರ ಜಿಲ್ಲೆ. |
| **ಪ್ರಮಾಣೀಕರಿಸಿದ ದಿನಾಂಕ** | 12.05.2026. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ಚಾಸಾ-1 ರವರು ನನ್ನ ಹೆಂಡತಿ. ಒಂದರಿಂದ ಏಳನೇ ಆರೋಪಿತರು ನನಗೆ ಗೊತ್ತು. ಅದೇ ರೀತಿ ಚಾಸಾ-1 ರಿಂದ 3 ಮತ್ತು 5 ರಿಂದ 7 ರವರು ಗೊತ್ತು. 1998 ರಲ್ಲಿ ನಾನು ಕೃಷ್ಣ ಮೂರ್ತಿ ಎನ್ನುವವರಿಂದ ಸೈಟ್ ನಂ.31 ನ್ನು ರೂ.2 ಲಕ್ಷಗಳಿಗೆ ನೊಂದಾಯಿತ ಕ್ರಯ ಪತ್ರದ ಮೂಲಕ ಖರೀದಿ ಮಾಡಿರುತ್ತೇನೆ. ಸದರಿ ಕೃಷ್ಣಮೂರ್ತಿ ಎನ್ನುವವರು ಸದರಿ ಸೈಟ್ ನ್ನು ಗ್ಯಾಬ್ರೀಲ್ ಎನ್ನುವವರಿಂದ 1986 ರಲ್ಲಿ ನೊಂದಾಯಿತ ಕ್ರಯ ಪತ್ರದ ಮೂಲಕ ಖರೀದಿ ಮಾಡಿರುತ್ತಾರೆ. ನಾನು ಖರೀದಿ ಮಾಡಿದ ನಂತರ ಸದರಿ ಸೈಟ್ ನಲ್ಲಿ ಒಂದು ಶೆಡ್ ನ್ನು ಹಾಕಿದ್ದೆ ಹಾಗೂ ಸದರಿ ಸೈಟ್ ಗೆ ಸಂಬಂದ ಪಟ್ಟ ಎಲ್ಲಾ ದಾಖಲೆಗಳನ್ನು ಹೊಂದಿರುತ್ತೇನೆ. ವಿದ್ಯುತ್ ಮತ್ತು ನೀರಿನ ಸಂಪರ್ಕಗಳನ್ನು ಸಹ ಪಡೆದಿರುತ್ತೇನೆ. ಅಲ್ಲದೇ ಸಂಬಂದಪಟ್ಟ ಪ್ರಾಧಿಕಾರಕ್ಕೆ ತೆರಿಗೆಯನ್ನು ಸಹ ಪಾವತಿ ಮಾಡಿರುತ್ತೇನೆ. ಅದೇ ರೀತಿ ಸದರಿ ಸೈಟ್ ಗೆ ನಾನು ಇ-ಸ್ವತ್ತನ್ನು ಸಹ ಮಾಡಿಸಿಕೊಂಡಿರುತ್ತೇನೆ. ಈ ಪ್ರಕರಣದ ಆರೋಪಿತರು ಮತ್ತು ಮಾದೀಪ್ ಹಾಗೂ ಶ್ರೀನಿವಾಸ್ ರವರುಸೈಟ್ ನಂ.31ಕ್ಕೆ ಅತಿಕ್ರಮವಾಗಿ ಪ್ರವೇಶ ಮಾಡಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಸದರಿ ಸೈಟ್ ಗೆ ಒಂದು ಬ್ಯಾನರ್ ಸಹ ಅಳವಡಿಸಿದ್ದರು. ಈ ಬಗ್ಗೆ ಚಾಸಾ-1 ನನ್ನ ಹೆಂಡತಿ ಆರೋಪಿತರನ್ನು ವಿಚಾರಿಸಿದಾಗ ನನ್ನ ಹೆಂಡತಿಗೆ

**ಚಾಸಾ-4 ಪ್ರಾಸಾ-3**

ಪ್ರಾಣ ಬೆದರಿಕೆಯನ್ನು ಸಹ ಹಾಕಿರುತ್ತಾರೆ. ಈ ಸಂಬಂದ ನಾನು ಘಟನೆಯ ಬಗ್ಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲು : ಶ್ರೀ.ಪಿಆರ್ ಆರೋಪಿತರ ಪರ ವಕೀಲರಿಂದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ರೂ.300/- ಖರ್ಚಿನ ಸಹಿತ ಪಾಟೀಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**